# ಅರುಹು ಕುರುಹು

ಸಾಹಿತ್ಯ ಮತ್ತು ಸಂಸ್ಕೃತಿಯ ಶೋಧದಲ್ಲಿ...

# Aruhu Kuruhu

In Pursuit of Literature and Culture...

ಸಂ. 15, ಸಂ. 66-67, ಮಾರ್ಚ್-ಏಪ್ರಿಲ್ 2024, Vol. 15, Issue 66-67, March-April 2024

ತಜ್ಞ-ಪರಿಶೀಲಿತ ಮತ್ತು ದ್ವಿ-ಭಾಷಾ ಮಾಸ ಪತ್ರಿಕೆ

PEER - REVIEWED AND BI-LINGUAL MONTHLY JOURNAL





Co-Ordinator

Internal Quality Assurance Cell

PRINCIPAL

Good News Welfare Society's

Arts & Commerce First Grade College

KALABURAGI - 585 104

ISSN: 2347 - 5048

# ಅರುಹು ಕುರುಹು

ಸಾಹಿತ್ಯ ಸಂಸ್ಕೃತಿಯ ಶೋಧದಲ್ಲಿ

## Aruhu Kuruhu

In pursuit of Literature and Culture

ತಜ್ಞ-ಪರಿಶೀಲಿತ ಮತ್ತು ದ್ವಿ-ಭಾಷಾ ಮಾಸ ಪತ್ರಿಕೆ

PEER-REVIEWED AND BI-LINGUAL MONTHLY JOURNAL

ಸಂಪುಟ : ೧೫ ಸಂಚಿಕೆ : ೬೬-೬೭, ಮಾರ್ಚ್-ಏಪ್ರಿಲ್-೨೦೨೪

Volume :15, Issue : 66-67, MARCH-APRIL-2024

PEER REVIEW COMMITTEE

**Prof. Niranjan Vanalli**
Vice-Chancelar,Bengaluru North University, Kolar

**Prof. Vijayakumari S Karikal**
Director, KKIS, Mysorw University, Mysuru

**Prof. Muzafer Assadi**
Professor, Mysore University, Mysuru

**Dr. Anamika**
Asst. Professor, Jawarlal Nehru University, Delhi

**Dr. N. Amareswaran Reddy**
Asst.Professor, NEHU, Shillong, Meghalaya

**Dr.. H. N. Narasingappa**
Professor, Hasanamba B.Ed College, Hassan

**Dr. Meti Mallikarjuna**
Professor, Kuvempu University, Shivamogga

**Dr. Shanthappa N Dambala**
Professor, Kannada VV Extension Center, Devdurga

**Dr. Paramashivamurthy**
Professor, Tumkur University, Tumkur

**Dr.Vijayakumar H .Vishwamanava**
Professor, Karnataka Central University, Kalaburgi

ಸಂಪಾದಕರು
ಪ್ರೊ. ಎಚ್ ಎಸ್ ಉಮೇಶ

Editor
**Prof. H.S Umesha**

ಸಹ ಸಂಪಾದಕರು
ಡಾ ಹಾಲತಿ ಸೋಮಶೇಖರ್

ವ್ಯವಸ್ಥಾಪಕ ಸಂಪಾದಕರು
ಹಾ ತಿ ರತ್ನ

Managing Editor
**H T Rathna**

ಮುಖಪುಟ ವಿನ್ಯಾಸ
ಗಂಗೋತ್ರಿ ಮಹೇಶ್

ತಾಂತ್ರಿಕ ಸಹಕಾರ
ವಿಪುಲ್ ಹಾಲತಿ

ಅರುಹು ಕುರುಹು ದ್ವಿ-ಭಾಷಾ ಮಾಸ ಪತ್ರಿಕೆ
#೧೦, 'ಬೆಳಕು', ಕುವೆಂಪು ರಸ್ತೆ, ಪೃಥ್ವಿ ಬಡಾವಣೆ, ದಟ್ಟಗಳ್ಳಿ ೩ನೆಯ ಹಂತ
ಮೈಸೂರು-೫೭೦೦೩೩, ಮೊ: ೯೮೮೬೬೨೨೮೩೩

ARUHU KURUHU Bi-lingual Monthly Journal
#10,Belaku,Kuvempu Road, Pruthvi Layout, Dattagalli 3rd Stage
Mysuru-570033, mob: 9886622833,
...@gmail.com Website:www.vismaya...

Co-Ordinator
Internal Quality Assurance Cell
Good News Welfare Society's Arts & Commerce
First Grade College, Kalaghatgi-581204

PRINCIPAL
Good News Welfare Society's
Arts & Commerce First Grade College
KALGHATGI - 581 2..

G. N. W. S's ARTS ... KALAG...

## ಕನ್ನಡ ವಿಭಾಗ


೧. ಭಾರತೀಯ ಶಾಸನಶಾಸ್ತ್ರದ ಮಹತ್ವ
-ಡಾ. ರಾಮು ಹಸನಪ್ಪ ಸಜ್ಜನ /೦೯

೨. ಹರಿಸೇವೆ_ಮಠಸೇವೆಯಲ್ಲಿ ಮುಖವಾಡ ಪರಂಪರೆಯ ಪ್ರಭಾವ ಮತ್ತು ಪರಿಣಾಮ
-ಟಿ. ಲಕ್ಷ್ಮೀನಾರಾಯಣ /೧೪

೩. ಗಾದೆಗಳಲ್ಲಿ ವೈಚಾರಿಕತೆ
-ಅಕ್ಷತಾ ಶಿ ಕುಬ್ಯಾಳ /೨೧

೪. ಜನಪದ ಸಾಹಿತ್ಯಕ್ಕೆ ಸಿಂಪಿ ಲಿಂಗಣ್ಣನವರ ಕೊಡುಗೆ
-ಡಾ. ಎ.ಎಂ. ಸತ್ಯನಾಯಕ /೨೬

೫ ತಂತ್ರಜ್ಞ ಚೌಪದಿಗಳು/TechnoWise Quatrains
-ಡಾ ಕೆ ಚಿದಾನಂದಗೌಡ /೨೯

೬. ಸಿದ್ಧೇಶ್ವರರು
-ಅಮರ್ಜಾ /೩೦

೭ ಭಾರತದ ಸಂಸ್ಕೃತಿ ಮತ್ತು ಪರಂಪರೆ
-ಡಾ. ರಾಮು ಹಸನಪ್ಪ ಸಜ್ಜನ /೩೧

೮. ಸೃಜನಶೀಲತೆ ಮತ್ತು ಲಲಿತಕಲೆಗಳು
-ಡಾ.ಶಿವಾನಂದ ಎಚ್.ಬಂಟನೂರ/೩೬

೯. ಬಸವತತ್ವ ಪರಿಪಾಲಕರು ಲಿಂ.ಡಾ॥ ಮಹಾಂತ ಶಿವಯೋಗಿಗಳು
*ಪ್ರೊ.ಸಿ.ಎಸ್. ಕಟಗೇರಿ ** ಡಾ.ಪ್ರಕಾಶ. ಎನ್. ನರಗುಂದ /೪೩

೧೦. 'ಮಣ್ಣು' ಕಥೆಯ ಸಾರ್ಥಕ ಮರು ಓದು
-ಡಾ.ಬಸವರಾಜ ಡೋಣೂರ /೪೬

೧೧. ಬಿ.ಶಾಮಸುಂದರ ಅವರ ಸಣ್ಣಕಥಾ ಸಾಹಿತ್ಯದಲ್ಲಿ ರಾಜಕೀಯ ಧಾರ್ಮಿಕ ಮತ್ತು ಸಾಹಿತಿಕ ನೆಲೆಗಳು
-ಡಾ.ಡಿ.ರವಿ /೫೪

೧೨. ನ್ಯಾಷನಲ್ ಕೆಡೆಟ್ ಕೋರ್@ ೨೦೨೪: ಯುವಜನತೆಯ ಸರ್ವಾಂಗೀಣ [illegible]
-(ಕ್ಯಾಪ್ಟನ್) ಡಾ. ಮಲ್ಲೇಶಿ ಎನ್. ಸಿದ್ದಲಿಂಗಪ್ಪನವರ/೬೨

೧೩. ಮಾನವ ಬಂಡವಾಳವನ್ನು ಅಭಿವೃದ್ಧಿಪಡಿಸುವಲ್ಲಿ ಶಿಕ್ಷಣದ ನಿರ್ಣಾಯಕ ಪಾತ್ರ: ಪ್ರಶಿಕ್ಷಣಾರ್ಥಿ ವಿದ್ಯಾರ್ಥಿಗಳ ಅಧ್ಯಯನ
-ಕುಮಾರ್ ಕೆ. /೭೦

೧೪. ಕನ್ನಡ ಮುಸ್ಲಿಂ ಲೇಖಕರ ಸಾಹಿತ್ಯದ ಸ್ವರೂಪ ಮತ್ತು ಬೆಳೆವಣಿಗೆ
-ಡಾ.ಸುಜಾತಾ ಮಹಾದೇವಪ್ಪ /೭೭

೧೫. ನಿಂದನೆ ಗೆ ವಂದನೆ
-ಡಾ. ಹೆಚ್ ಎನ್ ಮಂಜುರಾಜ್ /೮೪

೧೬. 'ಶಾಂತವೇರಿ ಗೋಪಾಲಗೌಡ': ಆದರ್ಶ ರಾಜಕಾರಣಿಯೊಬ್ಬರ ವಿಶಿಷ್ಟ ಜೀವನ ಚರಿತ್ರೆ
-ಡಾ. ಮೋಹನ್ ಕುಮಾರ್ ಎಂ.ಜೆ./೮೮

೧೭. ಕನ್ನಡ ನವೋದಯ ಸಾಹಿತ್ಯ ಸಂದರ್ಭದಲ್ಲಿ ಡಾ.ಸಿದ್ಧಯ್ಯ ಪುರಾಣಿಕರ 'ಆತ್ಮಾರ್ಪಣ' ನಾಟಕ (೧೯೪೮)ದ ಕೊಡುಗೆ
-ಡಾ.ಶಿವಪುತ್ರ ಸಿದ್ರಾಮ /೯೪

೧೮. ಕರುನಾಡಿನ 'ಅಮೃತ'
-ಡಾ ಎಂ ಮಾದವ /೯೯

೧೯. ಲಾಲ ಮಹಮ್ಮದ ಉಸ್ತಾದ ಅವರ 'ಗುಡ್ಡದವ' ಕಾದಂಬರಿ ಅವಲೋಕನ
-ಶಾಲಿನಿ ಪುಟ್ಟರಾಜ /೧೦೩


## ENGLISH DIVISON


1. ELUSIVE MYSTERY OF B.M. SRI'S ಇಂಗ್ಲೀಷ್ ಗೀತೆಗಳು
-Dr C.N.Srinath /105

2. Digital Transformation in Degree College Libraries
-Praveen /107

3. The Role of Consumer Rights: A Focus on Consumer Courts
-Dr. Ranganathaiah C.B/112

4. Beyond Tradition: The Modern Professionalism of Indian Folk Theatre Forms
-Dr.Prabhuraj


Co-Ordinator
Internal Quality Assurance Cell
Good News Welfare Society's Art & Commerce
First Grade College, Kalaghatgi-581204

PRINCIPAL
Good News Welfare Society's
Arts & Commerce First Grade College
KALGHATGI



1



2




3



4



5



6

1. ಅತ್ಯಂತ ಉಗ್ರ ಎಂದು ಭಾವಿಸುವ ಕರಿಯಜ್ಜ ಎಂದು ಕರೆಯುವ ಕಪ್ಪು ಹರಿಗೆ
2. ಕರಿಯಜ್ಜ ಮತ್ತು ಕೆಂಚಜ್ಜರನ್ನು ಪೂಜಾ ವಿಧಾನ ಆರಂಭಿಸುವ ಮುನ್ನ ಅಲಂಕರಿಸಿರುವುದು
3. ಹರಿಗೆಗಳನ್ನು ಹೊರುವ ಹರಿಸೇವಕರು ಪೂಜೆಯಲ್ಲಿ ಕುಳಿತಿರುವುದು
4. 5. 6. ಪೂಜಾ ಕಾರ್ಯ ನಡೆದ ನಂತರ ಹರಿಗೆಯನ್ನು ಧರಿಸಿದ ಹರಿಸೇವಕರು ಮತ್ತು ಪೂಜಾ ಕಾರ್ಯ






# ಗಾದೆಗಳಲ್ಲಿ ವೈಚಾರಿಕತೆ

ಅಕ್ಷತಾ ಶಿ ಕುಬ್ಯಾಳ
ಕನ್ನಡಉಪನ್ಯಾಸಕಿ, ಗುಡ್ ನ್ಯೂಸ್ ವೆಲ್ಫೇರ್ ಸಂಸ್ಥೆಯ ಕಲಾ ಹಾಗೂ
ವಾಣಿಜ್ಯ ಪ್ರಥಮದರ್ಜೆ ಮಹಾವಿದ್ಯಾಲಯ, ಕಲಘಟಗಿ

ಜನಪದರೆಂದರೆ ಮೂಢರು, ಅಜ್ಞಾನಿಗಳು ಮತ್ತು ಅನಕ್ಷರಸ್ಥರೆಂಬುದು ಸಾಮಾನ್ಯ ಅಭಿಪ್ರಾಯವಾಗಿತ್ತು. ಅವರು ಅನಕ್ಷರಸ್ಥರೆಂಬುದೇನೋ ನಿಜವೇ. ಆದರೆ ಅವರು ಹುಂಬರಲ್ಲ, ದಡ್ಡರಲ್ಲ ಮತ್ತು ಅಜ್ಞಾನಿಗಳಲ್ಲ. ಅವರ ಬುದ್ಧಿವಂತಿಕೆಯನ್ನು ಗುರುತಿಸುವಲ್ಲಿ ಸೋಲಲಾಗಿತ್ತು ಅಷ್ಟೇ. ಇಂದು ಅವರ ಜ್ಞಾನಭಂಡಾರವೆಲ್ಲ ಪುಸ್ತಕರೂಪ ಪಡೆದು ಜ್ಞಾನದಿಗಂತವನ್ನು ವಿಸ್ತರಿಸುತ್ತಿದ್ದರೂ 'ಹಿತ್ತಲ ಗಿಡ ಮದ್ದಲ್ಲ' ಎಂದರೆ ದಡ್ಡತನವಾದೀತು! ಅದರಲ್ಲೂ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂದು ಸವಾಲೆಸೆಯಬೇಕೆಂದರೆ ಎಂಟೆದೆಯೇ ಇರಬೇಕು. ಅಂತಹ ಧೈರ್ಯ ಬಂದಿದ್ದು ಹೇಗೆ? ಎಲ್ಲಿಂದ? ಎಂದರೆ ಜೀವನಾನುಭವದಿಂದ. ಜೀವನಕ್ಕಿಂತ ದೊಡ್ಡಗುರು ಇರುವುದುಂಟೇ? ಅಲ್ಲಿಂದ ಹೊಮ್ಮಿದ ನುಡಿಮುತ್ತುಗಳೇ ಗಾದೆಗಳು. ಅವು ಜನಪದರ ವಿಚಾರವಾದಕ್ಕೆ ಹಿಡಿದ ಕೈಗನ್ನಡಿಯಾಗಿವೆ.

ಇದ್ದುದ್ದನ್ನು ಇದ್ದಂತೆ ಮತ್ತು ಕಂಡದ್ದನ್ನು ಕಂಡಂತೆ ಯಾವುದೇ ಮುಲಾಜಿಲ್ಲದೆ ನೇರವಾಗಿ, ಸ್ಪಷ್ಟವಾಗಿ ಮತ್ತು ಸಂಕ್ಷಿಪ್ತವಾಗಿ ಹೇಳುವುದು ಗಾದೆಗಳ ಹುಟ್ಟುಗುಣ. ಅದರಲ್ಲಿ ಮೌಢ್ಯತೆ ಇಲ್ಲವೇ ಇಲ್ಲವೆಂದು ಖಡಾಖಂಡಿತವಾಗಿ ಹೇಳಲಾಗದು. ಜೊತೆಗೆ ಆ ಮೌಢ್ಯತೆಯನ್ನು ಹೊಡೆದೋಡಿಸುವ ವೈಚಾರಿಕತೆಯೂ ಇಲ್ಲದೇ ಇಲ್ಲ. "ಸಮಾಜದಲ್ಲಿ ನಡೆಯುತ್ತಿದ್ದ ಅನ್ಯಾಯ, ಅಧರ್ಮ, ವಂಚನೆ, ಮೋಸ, ಢಾಂಬಿಕತೆ, ಕೀಳು–ಮೇಲುಗಳ ಭಾವನೆ ಮುಂತಾದ ವಾಸ್ತವ ಅಕೃತ್ಯಗಳನ್ನು ಕಂಡು ನಮ್ಮ ಈ ಜನಪದ ಸೃಷ್ಟಿಕರ್ತರು ಕಣ್ಮುಚ್ಚಿ ಕುಳಿತುಕೊಂಡಿರಲಿಲ್ಲ. ಅದನ್ನು ಅಷ್ಟೇ ಧೈರ್ಯವಾಗಿ ಎದುರಿಸಿದ್ದರು, ಪ್ರಬಲವಾಗಿ ವಿರೋಧಿಸಿದ್ದರು. ಸಾಧ್ಯವಿಲ್ಲವೆಂದಾಗ ಮಾರ್ಮಿಕವಾದ ಮಾತಿನ ಮೂಲಕ ಪ್ರತಿಭಟಿಸಿದ್ದರು. ಇದರ ಎಲ್ಲ ಉದ್ದೇಶ ಸಮಾಜ ಸಂಸ್ಕಾರ, ವ್ಯಕ್ತಿಯ ಉದ್ಧಾರ ಮತ್ತು ಶಾಂತಿ ಸಮಾನತೆಗಳ ಸ್ಥಾಪನೆಯೇ ಆಗಿತ್ತು. ಈ ತರಹದ ಗಾದೆಗಳಲ್ಲಿ ಕೆಚ್ಚಿದೆ, ಆದರೆ ಕಿಚ್ಚಿಲ್ಲ; ಬೆಳಕುಂಟು, ಬೆಂಕಿಯಿಲ್ಲ; ಮೊನಚುಂಟು, ಆದರೆ ಇರಿತವಿಲ್ಲ; ಹಾಸ್ಯ ವಿಡಂಬನೆಗಳುಂಟು, ಅಸೂಯೆಯಿಲ್ಲ." (ಜಾನಪದ ಪ್ರಕಾರಗಳು, ರಾಗೌ, ತನುಮನ ಪ್ರಕಾಶನ, ಮೈಸೂರು, ೨೦೧೨ ಪುಟ ಸಂಖ್ಯೆ ೧೩೧)ಅವುಗಳಲ್ಲಿ ದಿಟ್ಟವಾಗಿ ಸುತ್ತ–ಮುತ್ತ ನಡೆಯುತ್ತಿರುವ ಘಟನೆಗಳನ್ನು ಸೂಕ್ಷ್ಮವಾಗಿ ಗಮನಿಸಿ ಪ್ರತಿಕ್ರಿಯೆ ನೀಡುವ ವಿಮರ್ಶಾದೃಷ್ಟಿ ಮತ್ತು ವೈಚಾರಿಕತೆ ಮನೆ ಮಾಡಿವೆ.

ವೇದಗಳ ಪಾರಮ್ಯವಿದ್ದ ಪ್ರಾಚೀನ ಕಾಲದಲ್ಲಿ ವೇದವೇ ಸತ್ಯ, ವೇದವೇ ನಿತ್ಯವಾಗಿದ್ದವು. ಅವುಗಳನ್ನು ಕಡೆಗಣಿಸಿ ಮಾತನಾಡುವುದನ್ನು ಊಹಿಸಲು ಸಾಧ್ಯವಿರದ ಆ ಸಂದರ್ಭದಲ್ಲಿ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂದು ಹೇಳುವುದು ಸುಲಭದ ಮಾತಾಗಿರಲಿಲ್ಲ. ಆ ಮಾತಿನಲ್ಲಿ ತಣ್ಣನೆಯ ಕ್ರಾಂತಿಯಕಿಡಿ ಮತ್ತು ತಮ್ಮತನದ ಮೇಲಿನ ವಿಶ್ವಾಸವಿದೆ. ಅದಕ್ಕೆ ಸ್ಪಷ್ಟ ಮತ್ತು ನಿಖರ ಕಾರಣವಿದೆ. ವೇದ ಕಂಡೂ ಕಾಣದ ಎತ್ತರದ ಹಿಮಾಲಯಜ್ಞಾನ. ಗಾದೆ ವಾಸ್ತವ ಬದುಕಿನ ನಿತ್ಯ ಸರೋವರ. ಇದರಲ್ಲಿ ಗೆಳೆತನದ ಆತ್ಮೀಯತೆ, ಸಲಿಗೆ, ತುಂಟಾಟ, ಕಿತ್ತಾಟ, ಪ್ರೀತಿ, ವಿಶ್ವಾಸ ಎಲ್ಲವೂ ಇದೆ. ವೇದದಲ್ಲಿ ರಾಜನ ಗಾಂಭೀರ್ಯ, ಆಜ್ಞೆ ಮತ್ತು ಕಾನೂನಿದೆ. ಇದನ್ನೊಲ್ಲದ ಜನಪದರು ಸ್ವಚ್ಛಂದ ಮತ್ತು ಸರ್ವಸ್ವತಂತ್ರ ಗಾದೆಯನ್ನು ಅಪ್ಪಿಕೊಂಡರು, ಒಪ್ಪಿಕೊಂಡರು. ಅದರಲ್ಲಿಯೇ ತಮ್ಮ ವಿಚಾರವನ್ನು ಉತ್ತಿ, ಬಿತ್ತಿ, ಬೆಳೆದರು.

ಜನಪದರು ಮಹಾನ್ ದೈವಭಕ್ತರು. ಕಲ್ಲು, ಮಣ್ಣು, ನೀರು, ಮರ, ಪ್ರಾಣಿ–ಪಕ್ಷಿ ಎಲ್ಲದರಲ್ಲೂ ದೈವವನ್ನು ಕಾಣುವ ಮುಗ್ಧರು ಮತ್ತು ಮೂಢರು ಎಂದ ಮಾತ್ರಕ್ಕೆ ಅವರ ದೈವದ ಕುರಿತ

ಚಿಂತನೆಯನ್ನು ತಿರಸ್ಕರಿಸುವಂತಿಲ್ಲ. 'ಮಣ್ಣಾ ಬಿಟ್ಟು ಮಡಿಕೆಯಿಲ್ಲ, ತನ್ನ ಬಿಟ್ಟು ದೇವರಿಲ್ಲ' ಎಂಬಲ್ಲಿ ದೇವರ ಅಸ್ತಿತ್ವವನ್ನೇ ಪ್ರಶ್ನಿಸುವ ಭಾತಿಯಿದೆ. ಅದರಲ್ಲಿ ನಾನೆಂಬ ದರ್ಪವಿಲ್ಲ, ನೀನೇ ಎಲ್ಲ ಎಂಬ ಸಮರ್ಪಣಾ ಬಾವವಿಲ್ಲ. ದೈವಕ್ಕೆ ಸವಾಲೆಸೆಯುವ ಈ ರೀತಿ ಹೊಸತು. ದೇವರಿಂದ ಭಕ್ತರಲ್ಲ, ಭಕ್ತರಿಂದ ದೇವರು ಎಂಬುದು ಎಲ್ಲ ಧರ್ಮಶಾಸ್ತ್ರಗಳಿಗೂ ವಿರೋಧವಾದ ಮಾತು. ಆದರೆ ಅದು ದೇವರು ಮತ್ತು ಆ ದೇವರ ಭಕ್ತರಿಗೆ ಪ್ರಿಯವಾದ ಮಾತು. ಈ ದೈವ ಮತ್ತು ಭಕ್ತರ ಮಧ್ಯೆ ಬರಲು ಯಾರಿಗೂ ಅವಕಾಶವಿಲ್ಲ. ಆದರೆ 'ದೇವರು ವರ ಕೊಟ್ಟರೂ ಪೂಜಾರಿ ವರ ಕೊಡುವುದಿಲ್ಲ' ಎಂಬಂತೆ ಭಕ್ತ ಮತ್ತು ಭಗವಂತನ ಮಧ್ಯೆ ಪೂಜಾರಿ ಬಂದ. ಅದನ್ನು ಜನಪದರು ವಿರೋಧಿಸಿದರು. 'ಬಿದ್ದಕಲ್ಲು ಅಗಸನದ್ದು, ಎದ್ದಕಲ್ಲು ಪೂಜಾರಿಯದು' ಅಷ್ಟೇ, ದೇವರು ಎಲ್ಲರಿಗೂ ಸೇರಿದವನು. ಆ ದೇವರನ್ನು ಅವರು ದುಡಿಮೆಯಲ್ಲಿ ಕಂಡುಕೊಂಡು 'ದುಡಿಮೆಯೇ ದೇವರು' ಎಂದರು. ಏಕೆಂದರೆ 'ಹುಟ್ಟಿಸಿದ ದೇವರು ಹುಲ್ಲು ಮೇಯಿಸುತ್ತಾನೆಯೇ?' ಇಲ್ಲ. ದುಡಿದು ತಿನ್ನಬೇಕು ಇಲ್ಲವೇ ಉಪವಾಸ ಸಾಯಬೇಕು. ಆದ್ದರಿಂದ ಬದುಕು ಕಟ್ಟಿಕೊಳ್ಳಲು ಮತ್ತು ಜೀವನವನ್ನು ನಡೆಸಲು ದಾರಿಯಾದ ದುಡಿಮೆಯೇ ಅವರ ಪಾಲಿನ ದೇವರಾಯಿತು. ಆ ದೇವರ ಸಾಕ್ಷಾತ್ಕಾರಕ್ಕೆ ಕಾರಣವಾದ ಕಲ್ಲು, ಮಣ್ಣು, ನೀರು, ಗಾಳಿ, ಬೆಳಕು, ಮಳೆ, ಬೆಳೆ, ಎತ್ತು ಎಲ್ಲವೂ ದೇವರುಗಳೇ ಆದವು. ಆ ದೇವರ ಸೇವೆಯ ರೀತಿಯಂತೂ ವಿಭಿನ್ನ ಮತ್ತು ವಿಶೇಷ. 'ದೇಶ ಸೇವೆಯೇ ಈಶ ಸೇವೆ' ಮತ್ತು 'ಜನ ಸೇವೆಯೇ ಜನಾರ್ಧನ ಸೇವೆ' ಎಂಬ ಮಾತುಗಳಂತೂ ದೇವರ ಒಲುಮೆಗೆ ಪೂಜೆ-ಪುನಸ್ಕಾರ, ಯಾಗ-ಯಜ್ಞ ಮಾಡಬೇಕೆಂದಿಲ್ಲ. ದೇಶ ಮತ್ತು ಜನ ಸೇವೆಯನ್ನು ಮಾಡಿದರೆ ಸಾಕು ಎಂಬ ವಿನೂತನ ಧರ್ಮಪಾಲನೆಯ ಹಾದಿ ತೋರಿಸುತ್ತವೆ. ಈ ಪ್ರಚಂಡ ವೈಚಾರಿಕತೆಗೆ ತಲೆದೂಗದವರುಂಟೇ?

ಯಾವುದೇ ಕೆಲಸ ಯಶಸ್ವಿಯಾಗಬೇಕಾದರೆ ದೈವದ ಆಶೀರ್ವಾದ ಮತ್ತು ದೈವಬಲ ಇರಬೇಕೆಂಬುದು ಸಾಮಾನ್ಯ ನಂಬಿಕೆ. ಆ ದೈವ ನಿರ್ಣಯದ ವಿರುದ್ಧವೂ ಹೋರಾಡಿ ಗೆಲ್ಲಬಹುದು ಧೈರ್ಯವೊಂದಿದ್ದರೆ. ಅದಕ್ಕೆ 'ಧೈರ್ಯಶಾಲಿಗೆ ದೈವವೂ ಅನುಕೂಲ' ಎನ್ನುವುದು. ಹೆದರಿದರೆ ಹಗ್ಗವೂ ಹಾವಾಗಿ ಕಚ್ಚುತ್ತದೆ. ಧೈರ್ಯದಿಂದ ಇದ್ದರೆ ಹಾವೂ ಹೂವಾಗುತ್ತದೆ. ಅಂದರೆ ಧೈರ್ಯವಿದ್ದರೆ ಅರ್ಧಯುದ್ಧಗೆದ್ದಂತೆ, ಹೆದರಿದರೆ ಅರ್ಧಯುದ್ಧ ಸೋತಂತೆ. ಆದ್ದರಿಂದ ಸೋಲು, ನೋವು, ಕಷ್ಟಗಳಿಗೆ ವಿಧಿ, ದುರಾದೃಷ್ಟ ಮತ್ತು ಹಣೆಬರಹವನ್ನು ದೂರಿ ಪ್ರಯೋಜನವಿಲ್ಲ. ಆ ಎಲ್ಲವನ್ನು ಮೀರಿ ನಿಲ್ಲುವ ಮತ್ತು ಗೆಲ್ಲುವ ಶಕ್ತಿ ವ್ಯಕ್ತಿಯೊಳಗೆ ಇರುತ್ತದೆ. ಅಂತಹ ಧೈರ್ಯ ಮತ್ತು ಆತ್ಮವಿಶ್ವಾಸ ಇದ್ದರೆ ಇಡೀ ಜಗತ್ತನ್ನೇ ಗೆಲ್ಲಬಹುದು. ಅಂತಹವರೊಂದಿಗೆ ದೈವವೂ ಜೊತೆಯಾಗಿ ನಿಲ್ಲುತ್ತದೆ ಎಂಬುದು ಜನಪದರ ಅಚಲ ನಂಬಿಕೆ.

ಜ್ಯೋತಿಷ್ಯ ಅಥವಾ ಜಾತಕದ ಹೆಸರಿನಲ್ಲಿ ಭಯವನ್ನು ಹುಟ್ಟಿಸಿ ಹಣ ಸಂಪಾದಿಸುತ್ತಿರುವುದು ದಿನನಿತ್ಯ ಕಂಡುಬರುವ ದೃಶ್ಯವಾಗಿದೆ. ಈ ಜಾತಕ ಮತ್ತು ಹಣೆಬರಹವನ್ನು ನಂಬಿ ಕುಳಿತರೆ ಯಾವುದೇ ಸಂಪತ್ತು ತನ್ನಿಂದತಾನೇ ಕಾಲಕೆಳಗೆ ಬಂದು ಬೀಳುವುದಿಲ್ಲ. ಏಕೆಂದರೆ 'ಭವಿಷ್ಯ ಅಂಗೈಯಲ್ಲಿಲ್ಲ, ಮುಂಗೈ ಬಲದಲ್ಲಿದೆ'. ಉತ್ತಮ ಭವಿಷ್ಯ ಹುಟ್ಟಿದ ದಿನ, ರಾಶಿ, ನಕ್ಷತ್ರ ಆಧರಿಸಿ ನಿರ್ಧಾರಿತವಾಗುವುದಿಲ್ಲ. ತೋಳಿನಲ್ಲಿ ಎಷ್ಟು ತಾಕತ್ತಿದೆ, ಅದರಿಂದ ಎಷ್ಟು ಬೆವರು ಹರಿಸಿ ದುಡಿಯಲಾಗಿದೆ ಮತು ್ತ ತಲೆಯಲ್ಲಿ ಎಷ್ಟು ಬುದ್ಧಿಯಿದೆ, ಅದನ್ನು ಎಷ್ಟು ಉತ್ತಮ ಕೆಲಸಕ್ಕೆ ಬಳಸಿಕೊಳ್ಳಲಾಗಿದೆ ಎಂಬುದರ ಮೇಲೆ ಭವಿಷ್ಯ ನಿಂತಿದೆ ಹೊರತು ಹಸ್ತರೇಖೆಗಳ ಮೇಲಲ್ಲ. ಏಕೆಂದರೆ ಕೈ ಇಲ್ಲವರಿಗೂ ಭವಿಷ್ಯವಿದೆ. ಆದರೆ ಜ್ಯೋತಿಷಿ ಅದು-ಇದು, ಹಾಗೇ-ಹೀಗೇ ಎಂದು ಹೆದರಿಸಿ ಹೋಮ-ಹವನ, ಪೂಜೆ-ಪುನಸ್ಕಾರ ಮಾಡಿಸಿ ಜಾತಕದೋಷವನ್ನು ಪರಿಹರಿಸಿದೆನೆಂದು ಹೇಳುತ್ತಾನೆ. ಬ್ರಹ್ಮ ಹಣೆಬರಹ ಬರೆದನೋ ಇಲ್ಲವೋ ತಿಳಿಯದು. ಈತ ಮಾತ್ರ ಎಲ್ಲರ ಜಾತಕ ಬರೆಯುತ್ತಾನೆ ಮತ್ತು ತಿದ್ದುತ್ತಾನೆ. ಈತ ಬ್ರಹ್ಮನನ್ನು ಮೀರಿಸುವ ಮಹಾನ್ 'ಜ್ಯೋತಿಷಿ ಎಂದು



ವಿಧಿ ಬಿಟ್ಟೀತೇ?' ಬಿಡುವುದಿಲ್ಲ. ಎಲ್ಲರೂ ಕಷ್ಟ ಮತ್ತು ಸಾವಿಗೆ ಶರಣಾಗಲೇಬೇಕು. 'ಮೂಗಿರುವವರೆಗೆ ನೆಗಡಿ ತಪ್ಪದು, ಬದುಕಿರುವತನಕ ಕಷ್ಟ ತಪ್ಪದು'. ಈ ಸಣ್ಣ ಯೋಚನೆ ಮನಸ್ಸಿನಲ್ಲಿ ಮೂಡಿದರೆ ಸಾಕು ಎಲ್ಲ ಮೋಸದಾಟಗಳು ನಿಂತುಹೋಗುತ್ತವೆ.

'ಹೇಳೋದು ವೇದಾಂತ, ತಿನ್ನೋದು ಬದನೆಕಾಯಿ' ಎಂಬುದು ಉನ್ನತ ವರ್ಗದ ಕುರಿತಾದ ಕಟುವಿಮರ್ಶೆ. ಇಲ್ಲಿ ದೊಡ್ಡವರೆಂದು ಕರೆಸಿಕೊಳ್ಳುವವರ ಸಣ್ಣತನವನ್ನು ಎತ್ತಿ ತೋರಿಸಿ ಅವರ ಅಸಲೀ ಮುಖವನ್ನು ಬಿಚ್ಚಿಡುವ ಕೆಲಸ ಮಾಡಲಾಗಿದೆ. ಅವರಿಗೆ ಶ್ರೇಷ್ಠರು, ಉನ್ನತರು, ಪವಿತ್ರರು ಎಂದು ಪಟ್ಟಾಭಿಷೇಕ ಮಾಡಲಾಗಿತ್ತು. ಅದಷ್ಟೇ ಆಗಿದ್ದರೆ ಯಾವುದೇ ತೊಂದರೆ ಇರಲಿಲ್ಲ. ಆದರೆ ಮತ್ತೊಂದು ವರ್ಗವನ್ನು ಕನಿಷ್ಠ ನಿಕೃಷ್ಟ ಅಪವಿತ್ರ ಎಂದು ಹೀಗಳೆಯಲಾಗಿತ್ತು. ಜೊತೆಗೆ ಸಮಾಜದ ಸುಸ್ಥಿತಿಗೆಂದು ನಿಯಮಗಳನ್ನು ರೂಪಿಸಿದವರೇ ಅವುಗಳನ್ನು ಮುರಿಯುತ್ತಿದ್ದರು. ಅದನ್ನು ಪ್ರಜ್ಞಾವಂತ ಜನಪದರು ನೇರವಾಗಿ ಪ್ರಶ್ನಿಸಿದರು. 'ಶೀಲವಂತರ ಓಣಿಯಲ್ಲಿ ಕೋಳಿ ಮಾಯವಾದಂತೆ' ಎಂಬ ಮಾತಿನ ಒಳಾರ್ಥ ಎಂತಹ ಹಸಿದಡ್ಡನಿಗೂ ಅರ್ಥವಾಗುತ್ತದೆ. ಮಾಂಸ ತಿನ್ನುವವರು ಅಸಭ್ಯರು, ಅನಾಗರಿಕರು ಮತ್ತು ಅಸ್ಪೃಶ್ಯರೆಂದು ಜರಿದು, ಅವಹೇಳನ ಮಾಡಿ ಅವರಿಂದ ಎಲ್ಲ ಹಕ್ಕು-ಸ್ವಾತಂತ್ರ್ಯವನ್ನು ಕಿತ್ತುಕೊಂಡವರೇ ಕದ್ದುಮುಚ್ಚಿ ಮಾಂಸ ತಿನ್ನುವುದನ್ನು ಇಲ್ಲಿ ಪ್ರಶ್ನಿಸಲಾಗಿದೆ. ಒಂದು ಕಣ್ಣಿಗೆ ಬೆಣ್ಣೆ, ಮತ್ತೊಂದು ಕಣ್ಣಿಗೆ ಸುಣ್ಣ ಎನ್ನುವ ಈ ಅನೀತಿ ಮತ್ತು ಅನ್ಯಾಯಕ್ಕೆ ಪ್ರತಿರೋಧವನ್ನು ಒಡ್ಡಲಾಗಿದೆ.

ಪ್ರಜೆಗಳಿಂದ ರಾಜನೇ ಹೊರತು ರಾಜನಿಂದ ಪ್ರಜೆಗಳಲ್ಲ. ಪ್ರಜೆಗಳು ದುಡಿದು ತೆರಿಗೆ ಕಟ್ಟಿದರೆ ಮಾತ್ರ ರಾಜನ ರಾಜ್ಯಭಾರ. ಇಲ್ಲದಿದ್ದರೆ ರಾಜನ ಯಾವ ಆಟವೂ ನಡೆಯುವುದಿಲ್ಲ. ಅದಕ್ಕೆ 'ರಾಮರಾಜ್ಯವಾದರೂ ರಾಗೀಕಲ್ಲಾಡ್ತಾನೆ ಇರಬೇಕು' ಎಂದಿರುವುದು. ಇದನ್ನರಿಯದೇ ರಾಜ 'ನಾನೇ ಎಲ್ಲ' ಎಂದು ದರ್ಪದಿಂದ ಮೆರೆಯುತ್ತಾನೆ. ಇಂದು ಇವನು, ನಾಳೆ ಮತ್ತೊಬ್ಬ ರಾಜನಾಗುತ್ತಾನೆ. ಪ್ರಜೆಗಳ ಪದವಿ ಮಾತ್ರ ಶಾಶ್ವತ. ಅವರಿಗೆ ಅವರ ದುಡಿಮೆಯೇ ರಾಜ. ಅಂತಹ ಸ್ವಾಭಿಮಾನಿ ಮತ್ತು ಸ್ವಾವಲಂಬಿ ಪ್ರಜೆಗಳು ಯಾವ ರಾಜನ ಆಡಳಿತ ಬಂದರೂ ಬಗ್ಗುವುದಿಲ್ಲ ಮತ್ತು ಜಗ್ಗುವುದಿಲ್ಲ. 'ಹರಿಯೋ ನೀರಿಗೆ ದೊಣ್ಣೆನಾಯಕನ ಅಪ್ಪಣೆ ಬೇಕೇ?'ಅವರ ಜೀವನ ಅದರ ಪಾಡಿಗೆ ಸಾಗುತ್ತದೆ. ರಾಜ ಪ್ರತ್ಯಕ್ಷದೇವತಾ ಎಂಬ ಅಭಿಪ್ರಾಯವಿದ್ದರೂ ಸಹ ಅದನ್ನು ನಯವಾಗಿ ಅಲ್ಲಗಳೆಯುತ್ತಾರೆ. 'ನಾಯಿ ಸತ್ತರೂ ಹೆಣ, ರಾಯ ಸತ್ತರೂ ಹೆಣ' ಎಂಬಲ್ಲಿ ಪ್ರಭುತ್ವ ವಿರೋಧಿ ಧ್ವನಿಯಿದೆ. ಜೊತೆಗೆ ರಾಜನಿಗೆ ಹೆದರದ, ಬೆದರದ ಮತ್ತು ಅಂಜದ ಗತ್ತಿದೆ. ರಾಜನ ಹೆಣವೆಂದು ಆ ಹೆಣಕ್ಕೆ ವಿಶೇಷ ಶಕ್ತಿಗಳಿರುವುದಿಲ್ಲ. ಅದು ಸಹ ಕೊಳೆತು ನಾರುತ್ತದೆ. ಅದನ್ನು ಯಾರು ಮನೆಯಲ್ಲಿಟ್ಟುಕೊಂಡು ಜೋಪಾನ ಮಾಡುವುದಿಲ್ಲ. ಸುಡುತ್ತಾರೆ ಇಲ್ಲವೇ ಹೂಳುತ್ತಾರೆ. ಆಳುವ ವರ್ಗದ ಕುರಿತು ಜನಸಾನಾನ್ಯರ ಈ ತಿರಸ್ಕಾರ ವಿಶೇಷದರಲ್ಲಿ ವಿಶೇಷ.

ಸತ್ತ ಮೇಲೆ ಸಿಗುವಂತಹ ದೂರದಲ್ಲೆಲ್ಲೋ ಕಣ್ಣಿಗೆ ಕಾಣದಂತಿರುವ ಸ್ವರ್ಗ-ನರಕ ಎಂಬ ಎರಡು ಲೋಕಗಳ ಬಗ್ಗೆ ನೂರಾರು ಕಥೆಗಳಿವೆ. ಸಾವಿನ ಅನಂತರದ ಬದುಕಿನ ಬಗ್ಗೆ ಇರುವ ಕುತೂಹಲ ಈ ಕಾಲ್ಪನಿಕ ಕಥೆಗಳ ಸೃಷ್ಟಿಗೆ ಕಾರಣವಾಗಿದೆ. ಇವು ಭಯ ಮತ್ತು ಆತಂಕವನ್ನು ಹುಟ್ಟಿಸಿ ಜನರನ್ನು ಲೌಕಿಕ ಬದುಕಿನಿಂದ ದೂರ ತಳ್ಳುತ್ತಿದ್ದವು. ಜನಪದರು ಜೀವನ ಪ್ರೀತಿಯನ್ನು ಹೊಂದಿದವರಾಗಿದ್ದರಿಂದ ಕಾಣದ ಲೋಕಗಳಿಗಿಂತ ಕಣ್ಣಿಗೆ ಕಾಣುವ ಭೂಲೋಕದ ಬದುಕಿಗೆ ಹೆಚ್ಚಿನ ಮಹತ್ವ ನೀಡಿದರು. 'ಕೀರ್ತಿಯೇ ಕೈಲಾಸ, ಅಪಕೀರ್ತಿಯೇ ನರಕ' ಎಂಬ ಮಾತಿನ ಮೂಲಕ ಸ್ವರ್ಗ ಅಥವಾ ನರಕ ಬೇರೆಲ್ಲೋ ಇಲ್ಲ, ಭೂಮಿ ಮೇಲೆ ಇದೆ. ಅದು ವ್ಯಕ್ತಿಯ ವರ್ತನೆ ಮತ್ತು ನಡವಳಿಕೆಯನ್ನು ಅವಲಂಬಿಸಿರುತ್ತದೆ. ಉತ್ತಮ ನಡವಳಿಕೆಯಿಂದ ಭೂಸ್ವರ್ಗ ಅಥವಾ ಭೂಕೈಲಾಸ ಹಾಗೂ ಕೆಟ್ಟ ನಡವಳಿಕೆಯಿಂದ ಭೂನರಕ ಸೃಷ್ಟಿಯಾಗುತ್ತವೆ ಎಂಬುದನ್ನು ಸ್ಪಷ್ಟವಾಗಿ

ತಿಳಿಸಿದರು. ಅದನ್ನೇ ಬಸವಣ್ಣನವರು 'ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ', 'ಆಚಾರವೇ ಸ್ವರ್ಗ, ಅನಾಚಾರವೇ ನರಕ' ಎಂದಿರುವುದು. ಬದುಕಿರುವಾಗಲೇ ಮಾಡಿದ ಕೆಲಸದಿಂದ ಸ್ವರ್ಗ ಅಥವಾ ನರಕ ಕಾಣುತ್ತೇವೆ ಎಂಬುದು ಜನಪದರ ಲೆಕ್ಕಾಚಾರ. ಅವರ ಲೆಕ್ಕ ತಪ್ಪಿದ ಇತಿಹಾಸವೇ ಇಲ್ಲ. ಏಕೆಂದರೆ 'ಸತ್ತು ಹುಟ್ಟಿದವರಿಲ್ಲ, ಸ್ವರ್ಗ ಕಂಡವರಿಲ್ಲ'. ಹಾಗಾಗಿ ಪುನರ್ಜನ್ಮಗಳೆಲ್ಲ ಸುಳ್ಳು. ಈ ಜನ್ಮವೇ ನಿಜ. ಈ ಜನ್ಮವನ್ನು ಚೆನ್ನಾಗಿ ಬದುಕಬೇಕೆಂಬುದು ಅವರ ಆಲೋಚನೆಯಾಗಿತ್ತು.

ಕಾಶಿ, ರಾಮೇಶ್ವರ ಮುಂತಾದ ತೀರ್ಥಕ್ಷೇತ್ರದರ್ಶನದಿಂದ ಮಾಡಿದ ಪಾಪವೆಲ್ಲ ನಾಶವಾಗಿ ಪುಣ್ಯ ಪ್ರಾಪ್ತಿಯಾಗುತ್ತದೆ ಎಂದು ಜನಪದರು ನಂಬುತ್ತಿದ್ದರು. ಈಗಲೂ ನಂಬುತ್ತಿದ್ದಾರೆ. ಆದರೆ ಮಾಡಬಾರದ ಪಾಪ ಮಾಡಿದೇವರೇ ಕಾಪಾಡು ಎಂದರೆ 'ಮಾಡಿದುಣ್ಣೋ ಮಹಾರಾಯ' ಎನ್ನುತ್ತಾನೆ ಹೊರತು ಮಾಡಿದ ಪಾಪವೆಲ್ಲ ತೊಳೆದು ಮತ್ತಷ್ಟು ಪಾಪ ಮಾಡಲು ಅನುವು ಮಾಡಿಕೊಡುವುದಿಲ್ಲ. 'ಮಾಡೋದೆಲ್ಲ ಅನಾಚಾರ, ಮನೆ ಮುಂದೆ ಬೃಂದಾವನ' ಎಂಬಂತೆ ಮಾಡಬಾರದೆಲ್ಲವನ್ನೂ ಮಾಡಿದೇವರಿಗೆ 'ಧೂಪ ಹಾಕಿದರೆ ಪಾಪ ಹೋದಿತೇ?' ಸೊಳ್ಳೆಗಳು ಹೋಗುತ್ತವೆ ಅಷ್ಟೇ. ತಿರುಪತಿ ತಿಮ್ಮಪ್ಪ, ಧರ್ಮಸ್ಥಳದ ಮಂಜುನಾಥ ಇನ್ನಿತರ ದೇವರಿಗೆ ತಪ್ಪುಕಾಣಿಕೆ ಸಲ್ಲಿಸಿ ಕಾಪಾಡು ಎಂದು ಅಡ್ಡಬಿದ್ದರೆ ದುಡ್ಡು ಹೋಗುತ್ತದೆ, ಪಾಪವಲ್ಲ. 'ರಾಮೇಶ್ವರಕ್ಕೆ ಹೋದರೂ ಶನೀಶ್ವರನ ಕಾಟ ತಪ್ಪಲಿಲ್ಲ' ಎಂಬಂತೆ ಮಾಡಿದ ಪಾಪ ಶಿವನ ತಲೆಯೇರಿ ಕುಳಿತರೂ ಬಿಡುವುದಿಲ್ಲ. ಶಿಕ್ಷೆ ಸಿಕ್ಕೇ ಸಿಗುತ್ತದೆ ಎಂಬುದು ಜನಪದರ ಅನುಭವದ ಗಟ್ಟಿಮಾತು.

ಸಾಮಾನ್ಯವಾಗಿ ಜನರಿಗೆ ನೂರಾರು ಬಯಕೆಗಳಿರುತ್ತವೆ. ಅವುಗಳನ್ನು ಮಂತ್ರ, ತಂತ್ರ, ತಾಯಿತ, ಹರಕೆ, ವಾಮಾಚಾರ ಇತ್ಯಾದಿ ಮಾರ್ಗಗಳಿಂದ ಈಡೇರಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಇಂತಹ ಅವೈಜ್ಞಾನಿಕ ಮತ್ತು ಅಮಾನವೀಯ ಕ್ರಿಯೆಯನ್ನು ವಿಚಾರವಂತರು 'ಮಂತ್ರಕ್ಕೆ ಮಾವಿನಕಾಯಿ ಉದರಲ್ಲ' ಎಂದು ತಿರಸ್ಕರಿಸಿದರು. ಮಾವಿನ ಕಾಯಿ ಕಲ್ಲೇಟಿಗೆ ಉದುರುತ್ತದೆ ಹೊರತು ಮಂತ್ರ, ತಂತ್ರ, ಕುತಂತ್ರಕ್ಕಲ್ಲ. ಅದರಲ್ಲೂ 'ಮಂತ್ರಕ್ಕಿಂತ ಉಗುಳೇ ಜಾಸ್ತಿ' ಇರುವಾಗ ಕಣ್ಣು ಮುಚ್ಚಿ ಕಣ್ಕಟ್ಟ ವಿದ್ಯೆಯನ್ನು ನಂಬುವುದು ಸರಿಯಲ್ಲವೆಂದು ಸ್ಪಷ್ಟವಾಗಿ ತಿಳಿಸುತ್ತಾರೆ. ಹಾಗಿದ್ದರೂ ಮುಗ್ಧವಾಗಿ ಮದುವೆಯಾಗಬೇಕು, ಮಕ್ಕಳಾಗಬೇಕು, ಉದ್ಯೋಗ ಸಿಗಬೇಕು, ಪರೀಕ್ಷೆಯಲ್ಲಿ ಉತ್ತಮ ಅಂಕ ದೊರಕಬೇಕು ಮುಂತಾದ ಅಪೇಕ್ಷೆಗಳನ್ನಿಟ್ಟುಕೊಂಡು ಮನವಿ ಸಲ್ಲಿಸುವ ಭಕ್ತರಿಗೇನು ಬರವಿಲ್ಲ. ದೇವರ ಮೇಲೆ ಭಕ್ತಿಯಿರಬೇಕು. ಆದರೆ ಕುರುಡು ನಂಬಿಕೆ ಇರಬಾರದು. 'ಮಕ್ಕಳು ಇಲ್ಲಾಂತ ಮೈಲಾರಕ್ಕೆ ಹೋದರೆ ಇದ್ದ ಮೈ ಇಳಿದಿತ್ತು', 'ಕಂಡ ಕಂಡ ದೇವರಿಗೆ ಕೈ ಮುಗಿದರೂ ಗಂಡನಿಲ್ಲದೆ ಮಕ್ಕಳಾಗವು' ಎಂಬ ಜನಪದರ ನೇರ ನುಡಿ ಮುಜುಗರವನ್ನುಂಟುಮಾಡುತ್ತವೆಯಾದರೂ ಸತ್ಯವನ್ನು ಮುಖಕ್ಕೆ ಹೊಡೆದಂತೆ ಹೇಳುತ್ತವೆ. ಮುಚ್ಚುಮರೆಯಿಲ್ಲದೇ ಮಾತನಾಡುವ ಈ ರೀತಿ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸಿಬಿಡುತ್ತವೆ.

ಜನಪದರಲ್ಲಿ ಅನೇಕ ಮೂಢನಂಬಿಕೆಗಳು, ಅಂಧಾನುಕರಣೆಗಳು ಮತ್ತು ಕಂದಾಚಾರಗಳಿವೆ. ಹೊಚ್ಚಲ ಮೇಲೆ ಕುಳಿತರೆ ಸಾಲ ಹೆಚ್ಚಾಗುತ್ತದೆ, ಸಂಜೆ ಕಸವನ್ನು ಹೊರಚೆಲ್ಲಿದರೆ ಲಕ್ಷ್ಮೀ ಹೊರಹೋಗುತ್ತಾಳೆ, ಸಂಜೆ ಹೊತ್ತು ಉಪ್ಪನ್ನು ಉಪ್ಪು ಎನ್ನದೆ ಸಕ್ಕರೆ ಎಂದು ಕರೆಯಬೇಕು ಒಂದೇ ಎರಡೇ ಪಟ್ಟಿ ಬೆಳೆಯುತ್ತ ಹೋಗುತ್ತದೆ. ಅವುಗಳೊಂದಿಗೆ ಸಂಜೆ ಹೊತ್ತು ಕ್ಷೌರಿಕ ಮತ್ತು ಆತ ಬಳಸುವ ಸಲಕರಣೆಗಳನ್ನು [illegible]ದಾರದು ಎಂಬ ಮೂಢನಂಬಿಕೆಯೂ ಇತ್ತು. ಅದನ್ನು 'ನಾಪಿತ ಅಂದಾಕ್ಷಣ [illegible]ದಿತೇ?' ಎಂದು ವಿಚಾರವಂತರು ವಿರೋಧಿಸಿದರು. ಅರ್ಥವಿಲ್ಲದ ಈ ಆಚರಣೆಯಿಂದ ಯಾವುದೇ ಲಾಭವಿಲ್ಲ. ಅದರ ಬದಲಾಗಿ ಒಂದು ವರ್ಗವನ್ನು ಶೋಷಣೆ ಮಾಡಿದಂತೆ ಆಗುತ್ತದೆ ಅಷ್ಟೇ. ಇಂತಹ ಅನರ್ಥ ಆಚರಣೆಗಳು ನಿಲ್ಲಬೇಕೆಂದು ವೈಚಾರಿಕ ಪ್ರಜ್ಞೆವುಳ್ಳ ಜನಪದರು ಬಯಸಿದ್ದರು.

Co-Ordinator
Internal Quality Assurance Cell
Good News Welfare Society's Art & Commerce
First Grade College, Kalaghatgi-581204



ಹುಲಿಯ ಗುಣವೇ ಆಕ್ರಮಣ ಮತ್ತು ಕ್ರೌರ್ಯ. ಅಂತಹ ಹಸಿದ ಹುಲಿಯ ಕಣ್ಣಿಗೆ ಬಿದ್ದು ಬದುಕುವುದುಂಟೇ? ಅದರ ಮುಂದೆ ನಿಂತು ಅತ್ತುಕರೆದು ಬೇಡಿಕೊಂಡರೂ ಪ್ರಯೋಜನವಿಲ್ಲ. ಅದು 'ಹುಲಿ ಅಂದರೂ ತಿನ್ನುತ್ತೆ ಹುಲಿಯಪ್ಪ ಅಂದರೂ ತಿನ್ನುತ್ತೆ'. ಏಕೆಂದರೆ ಅದು ಬದುಕಬೇಕಾದರೆ ಬೇಟೆಯಾಡಲೇಬೇಕು, ಇಲ್ಲವೇ ಸಾಯಬೇಕು. ಅದಕ್ಕೆ ಸಾವು-ಬದುಕಿನ ಪ್ರಶ್ನೆ. ಅದರ ಎದುರು ಇರುವ ಜೀವಿಗೂ ಅಷ್ಟೇ. ಎರಡೂ ಹೋರಾಡಲೇಬೇಕು. ಗೆದ್ದರೆ ಬದುಕು. ಇದು ಪ್ರಕೃತಿಯ ನಿರ್ಣಯ. ಇಲ್ಲಿ ಹಿಂಸೆ-ಅಹಿಂಸೆಯೆಂಬ ಚರ್ಚೆಗೆ ಅವಕಾಶವಿಲ್ಲ. ಆದರೆ ಹೊಟ್ಟೆ ತುಂಬಿಸಿಕೊಳ್ಳಲೂ ಬೇಟೆಯಾಡುವ ಪ್ರಾಣಿಗೂ, ಹೊಟ್ಟೆತುಂಬಿದ ಮೇಲೂ ಬೇಟೆಯಾಡುವ ಮನುಷ್ಯನಿಗೂ ಅಪಾರ ವ್ಯಾತ್ಯಾಸವಿದೆ. ಮಾನವನಿಗಿಂತ ಪ್ರಾಣಿಗಳೇ ಗುಣದಲ್ಲಿ ಮೇಲು ಎಂಬುದು ಪದೇ ಪದೇ ಸಾಬೀತಾಗುತ್ತಲೇ ಇರುತ್ತದೆ. ಅದಕ್ಕೆ ಜನಪದರು ಪ್ರಾಣಿಗಳನ್ನು ಪೂಜಿಸುವುದು.

ವೈಚಾರಿಕತೆಯ ಮೊದಲ ಹಂತವೇ ಸತ್ಯಶೋಧ ಮತ್ತು ಸತ್ಯದರ್ಶನ. ಇದಕ್ಕೆ ಕೇವಲ ಎರಡು ಕಣ್ಣಿದ್ದರೆ ಸಾಲದು, ಮೈಯೆಲ್ಲ ಕಣ್ಣಾಗಿರಬೇಕು. ಏಕೆಂದರೆ ಬೆಳ್ಳಗಿರುವುದೆಲ್ಲ ಹಾಲಲ್ಲ, ಹೊಳೆಯುವುದೆಲ್ಲ ಹೊನ್ನಲ್ಲ. ಆದ್ದರಿಂದ ಪ್ರತ್ಯಕ್ಷಕಂಡರೂ ಪ್ರಮಾಣಿಸಿ ನೋಡಬೇಕು. ಅದಕ್ಕೆ ಪ್ರತಿಯೊಂದನ್ನು ಯೋಚಿಸಿ, ಚಿಂತಿಸಿ, ಪ್ರಶ್ನಿಸಿ ಮತ್ತು ತರ್ಕಿಸಿ ಒಪ್ಪಿಕೊಳ್ಳಬೇಕು. ಅಪ್ಪ ನೆಟ್ಟ ಆಲದ ಮರವೆಂದು ನೇಣು ಹಾಕಿಕೊಳ್ಳಲಾಗದು ಅಲ್ಲವೇ! ಆದರೆ ಇಂತಹ ವಿಚಾರವಂತರನ್ನು ವಿರೋಧಿಸುವ ದೊಡ್ಡ ಗುಂಪೇ ಇದೆ. ಕುರುಡರಿಗೆ ಎಣ್ಣೆ ಸೇರುವುದಿಲ್ಲವೆಂದು ಹರಳು ಬೀಜ ಬಿತ್ತಬಾರದೇ? ವಿಚಾರವಂತರು ಜನರ ಮನದಲ್ಲಿ ವಿಚಾರವನ್ನು ಬಿತ್ತೇ ಬಿತ್ತುವರು. ಅವರು ಯಾರೊಬ್ಬರ ಹಿತಕ್ಕಾಗಿ ಸಾರ್ವಜನಿಕರ ಬದುಕನ್ನು ಬಲಿಕೊಡಲು ಸಿದ್ಧವಿರುವುದಿಲ್ಲ. ತಮ್ಮ ಬಲಿಯನ್ನಾದರೂ ನೀಡುತ್ತಾರೆ ಹೊರತು ಒಬ್ಬ ಮುಗ್ಧ ಅಥವಾ ಅಮಾಯಕನ ಬಲಿಯಾಗುವುದನ್ನು ಸಹಿಸಲಾರರು. ಆದರೆ ಪ್ರಸ್ತುತ ಸಮಾಜದಲ್ಲಿ ಅವರು ದೇಶದ್ರೋಹಿ ಮತ್ತು ಧರ್ಮದ್ರೋಹಿ ಎಂಬ ಪಟ್ಟ ಕಟ್ಟಿಸಿಕೊಂಡು ಅಜ್ಞಾನಿಗಳ ಆಕ್ರೋಶಕ್ಕೆ ಬಲಿಯಾಗುತ್ತಿದ್ದಾರೆ. ಅಷ್ಟಲ್ಲದೇ ಹೇಳುತ್ತಾರೆಯೇ ಖಂಡಿತವಾದಿ ಲೋಕ ವಿರೋಧಿಯೆಂದು. ಇಂದು ಅಂತಹವರೇ ಅಂದರೆ ಬಸವಣ್ಣ, ಯೇಸು, ಸಾಕ್ರೆಟಿಸ್, ಬ್ರೂನೊ ಮುಂತಾದವರು ಮಹಾನ್ ಜ್ಞಾನಿ, ವಿಜ್ಞಾನಿ, ತತ್ವಜ್ಞಾನಿ ಮತ್ತು ದೇವರೆಂದು ಕರೆಸಿಕೊಳ್ಳುತ್ತಿದ್ದಾರೆ ಹೊರತು ಅವರಿಗೆ ಚಿತ್ರಹಿಂಸೆ ನೀಡಿದವರು ಮತ್ತು ಅವರನ್ನು ಕೊಂದವರು ಅಲ್ಲ. ಈ ಜೀವಭಯ ಜನಪದರಿಗೆ ಅಷ್ಟಾಗಿ ಇರಲಿಲ್ಲ. ಏಕೆಂದರೆ ಇಂತಹ ವಿಚಾರವನ್ನು ಒಬ್ಬರೇ ಸೃಷ್ಟಿಸಿದ್ದರೂ ಕೂಡ ಅದರ ಹಕ್ಕುಸ್ವಾಮ್ಯ ಇಡೀ ಸಮಾಜದ್ದಾಗಿತ್ತು. ಜೊತೆಗೆ ರಚನಾಕಾರರು ಅಜ್ಞಾತವಾಗಿ ಉಳಿದು ಬಿಡುತ್ತಿದ್ದರು. ಇದರಿಂದ ಕರ್ತೃವಿಗೆ ಯಾವುದೇ ಅಪಾಯ ಮತ್ತು ಭಯವಿರಲಿಲ್ಲವಾದರೂ ಅದನ್ನು ಬಳಸುವವರಿಗಂತೂ ಭಯ ಇದ್ದೇ ಇತ್ತು. ಅದನ್ನು ಎದುರಿಸುವ ಎದೆಗಾರಿಕೆಯನ್ನು ತೋರಿಸಿದ ಜನಪದರ ಸಾಹಸವನ್ನು ಮೆಚ್ಚಲೇಬೇಕು.

**ಪರಾಮರ್ಶನ ಗ್ರಂಥಗಳು**

೧. ಜಾನಪದ ಅಧ್ಯಯನ, ದೇಜಗೌ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, ೨೦೨೧
೨. ಜಾನಪದ ಪ್ರಕಾರಗಳು, ರಾಗೌ, ತನುಮನ ಪ್ರಕಾಶನ, ಮೈಸೂರು, ೨೦೧೨
೩. ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ, ಕಾಳೇಗೌಡ ನಾಗವಾರ, ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೧೫
೪. ಬೀದಿ ಮಕ್ಕಳು ಬೆಳೆದೊ, ಕಾಳೇಗೌಡ ನಾಗವಾರ, ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೨೨

PRINCIPAL
Good News Welfare Socie
Arts & Commerce First Grade C
KALGHATGI - 581204